SEPTEMBER 14, 2025

AKASHAVANI - DHARWAD

PRADESH SAMACHARA (KANNADA) 12 PM

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ರೈತರ ಕೃಷಿ ಉತ್ಪನ್ನಗಳ ಖರ್ಚು, ವೆಚ್ಚ ಆಧರಿಸಿ ಬೆಲೆ ನಿಗದಿ ಮಾಡುವುದರ ಜೊತೆಗೆ ರೈತರಿಗೆ ನ ್ಟವಾಗದಂತೆ ಬೆಂಬಲ ಬೆಲೆ ಶಿಫಾರಸು ಮಾಡಲಾಗುವುದು ಎಂದು ಕರ್ನಾಟಕ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾಕ್ಟರ ಅಶೋಕ ದಳವಾಯಿ ಹೇಳಿದರು. ರಾಯಚೂರು ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ, ಕಲ್ಯಾಣ ಕರ್ನಾಟಕ ಭಾಗದ ರೈತರೊಂದಿಗೆ ಆಯೋಜಿತ ಸಂವಾದ ಸಭೆಯಲ್ಲಿ ಪಾಲ್ಗೊಂಡು, ರೈತರ ಸಲಹೆಗಳನ್ನು ಆಲಿಸಿ, ಅವರು ಮಾತನಾಡಿದರು.  ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಅಧೀನದಲ್ಲಿ ಪ್ರತ್ಯೇಕವಾಗಿ ಕೃಷಿ ಬೆಲೆ ಆಯೋಗಗಳು ಕೆಲಸ ಮಾಡುತ್ತಿವೆ. ಮುಂಗಾರಿನಲ್ಲಿ 14, ಹಿಂಗಾರಿನಲ್ಲಿ 11 ಕೃಷಿ ಉತ್ಪನ್ನಗಳನ್ನು ಬೆಂಬಲ ಬೆಲೆ ಯೋಜನೆಯಡಿ ಖರೀದಿ ಮಾಡಲಾಗುತ್ತದೆ ಎಂದರು.

<><><>

'ಸಂಸದರ ಕ್ರೀಡಾ ಮಹೋತ್ಸವ 2025', ಆಯೋಜಿಸುವ ಕುರಿತು, ವಿವಿಧ ಕ್ರೀಡಾ ಸಂಸ್ಥೆಗಳ ಪದಾಧಿಕಾರಿಗಳು, ತರಬೇತುದಾರರು ಮತ್ತು ನಿರ್ಣಾಯಕರೊಂದಿಗೆ, ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ ಪ್ರಲ್ಹಾದ ಜೋಶಿ, ಹುಬ್ಬಳ್ಳಿಯಲ್ಲಿ ಸಮಾಲೋಚನಾ ಸಭೆ ನಡೆಸಿದರು. ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ಯುವಜನತೆಯಲ್ಲಿ ಕ್ರೀಡೆ ಹಾಗೂ ಸಾಂಸ್ಕೃತಿಕ ನಾಯಕತ್ವವನ್ನು ಉತ್ತೇಜಿಸಲು, ಯೋಜಿಸಿದೆ ಎಂದರು. 'ಧಾರವಾಡ ಕ್ರೀಡಾ ಮಹೋತ್ಸವ', 3 ಹಂತಗಳಲ್ಲಿ, ನಡೆಯಲಿದೆ. ಕ್ರೀಡಾಪಟುಗಳು Sansad khel mahotsav.in ಮೂಲಕ, ಈ ತಿಂಗಳ 20 ರೊಳಗೆ, ಹೆಸರು ನೋಂದಾಯಿಸುವಂತೆ, ಸಚಿವ ಜೋಶಿ ತಿಳಿಸಿದರು.

<><><>

ಮುಂಬರುವ ದಸರಾ ಕ್ರೀಡಾಕೂಟದ ವೇಳೆಗೆ, ವಿಜಯನಗರ ಜಿಲ್ಲಾ ಕ್ರೀಡಾಂಗಣದಲ್ಲಿ, 5 ಕೋಟಿ ರೂಪಾಯಿ ವೆಚ್ಚದ, ಕ್ರೀಡಾ ಶಾಲೆ ನಿರ್ಮಾಣಗೊಳ್ಳಲಿದೆ ಎಂದು,  ಶಾಸಕ ಎಚ್.ಆರ್. ಗವಿಯಪ್ಪ ಹೇಳಿದ್ದಾರೆ.  ದಸರಾ ಕ್ರೀಡಾಕೂಟ ಉದ್ಘಾಟಿಸಿ, ಮಾತನಾಡಿದರು. ದಸರಾ ಕ್ರೀಡಾ ಕೂಟದಲ್ಲಿ ಭಾಗವಹಿಸಿ ಗೆದ್ದ, ವಯಕ್ತಿಕ ಹಾಗೂ ತಂಡಗಳು, ವಿಭಾಗ ಮಟ್ಟದಲ್ಲಿ ಸ್ಪರ್ಧಿಸಲು, ಅರ್ಹತೆ ಗಳಿಸಿದವು.

<><><>

ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ ಆಯೋಜಿತ ಕೃಷಿ ಮೇಳ–2025 ರ, ಫಲಪುಷ್ಪ ಪ್ರದರ್ಶನ ಹಾಗೂ ವಿಶ್ಮಕಾರಿ ಕೀಟ ಪ್ರಪಂಚ ಪ್ರದರ್ಶನವನ್ನು ಇಂದು ರಾಜ್ಯಪಾಲರಾದ ಥಾವರಚಂದ್ ಗೆಹ್ಲೋಟ್ ಅವರು ರೈತರ ಜ್ಞಾನಾಭಿವೃದ್ಧಿ ಕೇಂದ್ರದಲ್ಲಿ ಉದ್ಘಾಟಿಸಿದರು.  ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಾಳೆ ಧಾರವಾಡ ಜಿಲ್ಲಾ ಪ್ರವಾಸ ಕೈಗೊಳ್ಳಲಿದ್ದು, ಮಧ್ಯಾಹ್ನ 2:55 ಕ್ಕೆ,

ಕೃಷಿ ವಿಶ್ವವಿದ್ಯಾಲಯದಲ್ಲಿ ಆಯೋಜಿತ, ಕೃಷಿ ಮೇಳ–2025 ಅನ್ನು ಉದ್ಘಾಟಿಸಲಿದ್ದಾರೆ. ಈ ಸಂದರ್ಭ ಸಾಧಕ ಕೃಷಿಕ ಹಾಗೂ ಕೃಷಿ ಮಹಿಳೆ ಪ್ರಶಸ್ತಿಗಳನ್ನು ಪ್ರದಾನಿಸಲಿದ್ದಾರೆ.

<><><>

ಸರಕು ಮತ್ತು ಸೇವಾ ತೆರಿಗೆ, ಕೇಂದ್ರ ಮಂಡಳಿ 56ನೇ ಸಭೆ ಶಿಫಾರಸಿನಂತೆ, ಪರಿಷ್ಕೃತ ದರಗಳು, ಈ ತಿಂಗಳ 22ನೇ ತಾರೀಖು, ನವರಾತ್ರಿಯ ಮೊದಲ ದಿನದಿಂದ, ದೇಶಾದ್ಯಂತ ಜಾರಿಗೊಳ್ಳಲಿವೆ. ಜೀವ ವಿಮೆ ವಯಕ್ತಿಕ ಪಾಲಿಸಿಗಳ ಮೇಲಿನ ತೆರಿಗೆಯನ್ನು, ಶೂನ್ಯಕ್ಕೆ ಇಳಿಸಲಾಗಿದೆ. ಜೀವ ವಿಮೆಗಳು 22ನೇ ತಾರೀಖಿನ ಬಳಿಕ, ತೆರಿಗೆ ಮುಕ್ತಗೊಳ್ಳಲಿವೆ. 33 ಜೀವರಕ್ಷಕ ಔಷಧಗಳ ಮೇಲಿನ ತೆರಿಗೆಯನ್ನು ಸಂಪೂರ್ಣ ಮುಕ್ತಗೊಳಿಸಲಾಗಿದೆ. ಈ ಬಗ್ಗೆ ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ಹಂಚಿಕೊಂಡಿದ್ದಾರೆ ಲೆಕ್ಕ ಪರಿಶೋಧಕರಾದ ಬೀದರ ನಗರದ ಕೇದಾರನಾಥ್ ಶೇತಕರ ...

<><><>

ಧ್ವನಿ: ಕೇದಾರನಾಥ ಶೇತಕರ 38 ಸೆಕೆಂದುಗಳು

<><><>

'ಸತತ ಸಕ್ರಿಯತೆಯಿಂದ, ಲಿಂಗ ಸಮಾನತೆ ಸಾಧನೆ', ಧ್ಯೇಯದೊಂದಿಗೆ, ನಾಳೆ, ಸೆಪ್ಟೆಂಬರ್ 15 ರಂದು, ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ, ರಾಜ್ಯಾದ್ಯಂತ ಅರ್ಥಪೂರ್ಣವಾಗಿ ಆಚರಿಸಲು, ಪೂರ್ವ ಸಿದ್ಧತೆ ಕೈಗೊಳ್ಳಲಾಗಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ, ನಾಳೆ ಜನ ಜಾಗ್ರತಿಗಾಗಿ, ಬೈಕ್ ಜಾಥಾ ಆಯೋಜಿಲಾಗಿದೆ ಎಂದು, ಸಮಾಜ ಕಲ್ಯಾಣ ಇಲಾಖೆ, ಉಪ ನಿರ್ದೇಶಕರು ತಿಳಿಸಿದ್ದಾರೆ.

<><><>

ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ, ಇಂದು ಕೊಪ್ಪಳ ಜಿಲ್ಲಾಡಳಿತ ಭವನದಿಂದ ಬೆಂಗಳೂರು ತನಕ ಆಯೋಜಿತ ಬೈಕ್ ರ್‍ಯಾಲಿಗೆ, ಜಿಲ್ಲಾ ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿ ವರ್ಣಿತ್ ನೇಗಿ ಚಾಲನೆ ನೀಡಿದರು.

<><><>

ಮಂಡ್ಯ ಜಿಲ್ಲೆ, ಪಾಂಡವಪುರ ತಾಲೂಕು, ಪಾಂಡವ ಕ್ರೀಡಾಂಗಣದಲ್ಲಿ, ವಿನೂತನ, ಸ್ವರಾಜ್ ಉತ್ಸವಕ್ಕೆ ಚಾಲನೆ ನೀಡಲಾಗಿದೆ. ಮಹಾತ್ಮ ಗಾಂಧೀಜಿ ಕಂಡ, ಗ್ರಾಮ ಸ್ವರಾಜ್ಯದ ಪರಿಕಲ್ಪನೆಯನ್ನು ಸಾಕಾರಗೊಳಿಸಲು, ಹಾಗೂ ಗ್ರಾಮೀಣ ಜನರ ಬದುಕನ್ನು ಸುಸ್ಥಿರಗೊಳಿಸಲು, ಮೇಲುಕೋಟೆ ಶಾಸಕ ದರ್ಶನ ಪುಟ್ಟನಯ್ಯ ನೇತೃತ್ವದಲ್ಲಿ, ಈ ಕಾರ್ಯಕ್ರಮ ಆಯೋಜಿತವಾಗಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ

<><><>